ಶ್ರೀ ಎ. ಎಂ. ಬೆಳ್ಳಿಯಪ್ಪ:- (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ರಾಜ್ಯ ಮಂತ್ರಿಗಳು)

ಅ) ಬಂದಿದೆ.

ಆ) ಇದೆ.

ಇ) ಮಂಗಳೂರು ಮೀನುಗಾರಿಕೆ ಬಂದರಿನ ನಿರ್ಮಾಣವು ನಡೆಯುತ್ತಿದೆ. ಮಲ್ಪೆ ಮೀನುಗಾರಿಕಾ ಬಂದರಿನ ಎರಡನೇ ಹಂತದ ಕಾಮಗಾರಿ ಕೆಲಸಗಳನ್ನು 92-93ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಯೋಜಿಸಲಾಗಿದೆ. ಹನ್ನೊಂದು ಸಣ್ಣ ಬಂದರು ಇಳಿದಾಣಗಳ ನಿರ್ಮಾಣವನ್ನು 8ನೇ ಯೋಜನೆಯಲ್ಲಿ ಕೇಂದ್ರ ಸರ್ಕಾರದ ಹಣಕಾಸಿನ ನೆರವಿನಿಂದ ಹಂತ ಹಂತವಾಗಿ ಕೈಗೆತ್ತಿಕೊಳ್ಳಲು ಯೋಜಿಸಲಾಗಿದೆ.

ಪಟ್ಟಣಗೆರೆ ಗ್ರಾಮ ಪಂಚಾಯ್ತಿಯ ಸರ್ಕಾರಿ ಓಣಿ ಜಮೀನಿನ ವಿಸ್ತೀರ್ಣ

586(911) ಶ್ರೀ ಪಿ. ಸಿ. ಸಿದ್ದನಗೌಡ:- (ಕಲಘಟಗಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ ಪಟ್ಟಣಗೆರೆ ಗ್ರಾಮ ಪಂಚಾಯಿತಿಯ ಸರ್ಕಾರಿ ಓಣಿ ಭೂಮಿಯ ವಿಸ್ತೀರ್ಣವೆಷ್ಟು?

ಆ) ಈ ಮೇಲ್ಕಂಡ ಭೂಮಿಯನ್ನು ಅಕ್ಕ ಪಕ್ಕದ ಭೂಮಾಲೀಕರು ಒತ್ತುವರಿ ಮಾಡಿ ಅತಿ ಕ್ರಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಭೂಮಿಯನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡು ಸದರಿ ಗ್ರಾಮದ ವಸತಿಹೀನ ನಿರ್ಗತಿಕರಿಗೆ ಹಂಚಲು ಕ್ರಮ ಕೈಗೊಳ್ಳುವುದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- (ಕಂದಾಯ ಸಚಿವರು)

ಅ) ಎರಡು ಎಕರೆಗಳು

ಆ) -ಹೌದು-

ಇ) ಅನಧಿಕೃತ ಅತಿಕ್ರಮಣಗಳನ್ನು ತಕ್ಷಣವೇ ಒಕ್ಕಲೆಬ್ಬಿಸಿ ಸದರಿ ಸರ್ಕಾರಿ ಓಣಿಯನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಕಾದಿರಿಸಲಾಗುವುದು.

ರೇಡಿಯೋ ಕಾಲರ್‌ನಿಂದ ಸತ್ತ ಹುಲಿಗಳ ಸಂಖ್ಯೆ

587 (912) ಶ್ರೀ ಎಂ. ನಾರಾಯಣ ಸ್ವಾಮಿ:- (ಬೇತಮಂಗಲ) ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1990-91, 1991-92 ರ ಸಾಲಿನಲ್ಲಿ ಎಷ್ಟು ಹುಲಿ ಚಿರತೆಗಳು ಮರಣ ಹೊಂದಿವೆ?

ಆ) ಇವುಗಳು ಸಾಯಲು ಕಾರಣಗಳೇನು? ಇವುಗಳಲ್ಲಿ ರೇಡಿಯೋಕಾಲರ್‌ನಿಂದ ಸತ್ತ ಪ್ರಾಣಿಗಳೆಷ್ಟು?

ಇ) ರೇಡಿಯೋ ಕಾಲರ್ ತೊಡಿಸುವುದರಿಂದ ಹುಲಿ ಚಿರತೆಗಳು ಸಾವನ್ನಪ್ಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದರೆ ಇನ್ನು ಮುಂದೆ ರೇಡಿಯೋ ಕಾಲರ್ ತೊಡಿಸುವುದನ್ನು ಸರ್ಕಾರ ನಿಲ್ಲಿಸುವುದೇ?

ಶ್ರೀ ಈ. ಟಿ. ಶಂಭುನಾಥ:- (ಅರಣ್ಯ ರಾಜ್ಯ ಸಚಿವರು)

ಆ)

ವರ್ಷ	ಹುಲಿ	ಚಿರತೆ
1990-91	11	7
1991-92	5	10

1990-91

	ಹತ್ಯೆ	ಸ್ವಾಭಾವಿಕ	ಪರಸ್ಪರ ಕಾದಾಟ	ಕಾಯಿಲೆ	ಒಟ್ಟು
ಹುಲಿ	3	1	1	6	11
ಚಿರತೆ	2	1	-	4	7

1991-92

ಹುಲಿ	2	1	1	1	5
ಚಿರತೆ	6	3	-	1	10

ರೇಡಿಯೋ ಕಾಲರ್‌ನಿಂದ ಸತ್ತ ಹುಲಿ ಚಿರತೆಗಳು ಯಾವುದೂ ಇರುವುದಿಲ್ಲ.

ಇ) ತಜ್ಞರ ಸಮಿತಿಯ ಶಿಫಾರಸ್ಸಿನಂತೆ ಹುಲಿ-ಚಿರತೆಗಳ ಸಾವಿಗೆ ರೇಡಿಯೋ ಕಾಲರ್ ತೊಡಿಸುವಿಕೆ ಅಥವಾ ಮತ್ತು ಒರಿಸುವಿಕೆ ಕಾರಣವಲ್ಲವೆಂದು ದೃಢಪಟ್ಟಿದೆ.

ಈ) ಸರ್ಕಾರದ ತೀವ್ರ ಪರಿಶೀಲನೆಯಲ್ಲಿರುತ್ತದೆ ಮತ್ತು ಶೀಘ್ರ ನಿರ್ಧಾರವನ್ನು ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಪಹಣಿ ಮತ್ತು ಇತರೆ ದಾಖಲೆಗಳನ್ನು ಕಂಪ್ಯೂಟರೀಕರಣ

588(913) ಶ್ರೀ ಎಂ. ನಾರಾಯಣ ಸ್ವಾಮಿ:- (ಬೇತಮಂಗಲ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಹಣಿ ಮತ್ತು ಇತರೆ ದಾಖಲೆಗಳನ್ನು ಕಂಪ್ಯೂಟರೀಕರಣಗೊಳಿಸಲು ಉದ್ದೇಶವಿದೆಯೇ?

ಆ) ಹಾಗಿದ್ದಲ್ಲಿ ಇದಕ್ಕೆ ತಗಲುವ ವೆಚ್ಚವೆಷ್ಟು?

ಇ) ರಾಜ್ಯದ ಯಾವ ಜಿಲ್ಲೆಯಲ್ಲಿ ಈ ಅನುಕೂಲ ದೊರೆತಿದೆ?

ಈ) ರಾಜ್ಯದ ಉಳಿದ ಜಿಲ್ಲೆಗಳಿಗೆ ಈ ಯೋಜನೆ ದೊರೆಯುವುದೇ?

ಉ) ಹಾಗಿದ್ದಲ್ಲಿ ಎಂದಿನಿಂದ ಜಾರಿಗೆ ಬರುತ್ತದ ತಿಳಿಸಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- (ಕಂದಾಯ ಸಚಿವರು)

ಅ) ಹೌದು

ಆ) ಪ್ರತಿ ಜಿಲ್ಲೆಗೆ ಸುಮಾರು 30 ಲಕ್ಷ ರೂ ಬೇಕಾಗಬಹುದು.

ಇ) ಗುಲ್ಬರ್ಗಾ ಜಿಲ್ಲೆಗೆ ದೊರಕಿಸಲಾಗುತ್ತಿದೆ.

ಈ) ದೊರಕಿಸುವ ಪ್ರಯತ್ನ ನಡೆಸಲಾಗುತ್ತಿದೆ.

ಉ) ಕೇಂದ್ರ ಸರ್ಕಾರದಿಂದ ಧನ ಸಹಾಯ ದೊರಕಿದಲ್ಲಿ, ಉಳಿದ ಜಿಲ್ಲೆಗಳಲ್ಲಿ ಜಾರಿಗೆ ತರಲಾಗುವುದು.